## ಮ್ಯಾಗ್ನೆಟ್ ಪವರ್

ಮೊನ್ನೆ ಮುಂಗಾರಿನ ಅಬ್ಬರ ಜೋರಾಗಿ, ಪಕ್ಕದ ತೋಟದಲ್ಲಿದ್ದ ನುಗ್ಗೆಮರ ಬುಡ ಸಮೇತ ಬಿದ್ದಿತ್ತು. ನಮಗಂತೂ ನುಗ್ಗೆ, ಅದರ ಸೊಪ್ಪಿನ ಖಾದ್ಯಗಳು ತುಂಬಾ ಇಷ್ಟ. ಇದನ್ನೆ ನಾನು ಬೆಂಗಳೂರಿನಿಂದ ಬಂದಿದ್ದ ದೊಡ್ಡಪ್ಪದೊಡ್ಡಮ್ಮನಿಗೆ ಹೇಳಿದೆ. ಅದಕ್ಕವರು, 'ನಮಗೆ ಇದು ಗೊತ್ತೇ ಇಲ್ಲ' ಎಂದರು. ಅದಕ್ಕೆ ಉತ್ತರವಾಗಿ ನನ್ನಮ್ಮ ಹೇಳಿದರು, 'ನುಗ್ಗೆಸೊಪ್ಪಲ್ಲಿ ಕಬ್ಬಿಣದ ಅಂಶ ಜಾಸ್ತಿ ಇರತ್ತೆ, ತುಂಬಾ ಒಳ್ಳೆಯದು' ಅಂತ. ಅಷ್ಟರಲ್ಲಿ ಹಾಸ್ಯ ಪ್ರವೃತ್ತಿಯ ನನ್ನ ಅಪ್ಪ ಬೀರುವಿನಿಂದ ಒಂದು ಮ್ಯಾಗ್ನೆಟ್ ತುಂಡು ತಂದು ಅದರ ಸುತ್ತಾ ಕೈಯಾಡಿಸುತ್ತ ಹೇಳಿದರು: 'ಅಯ್ಯೋ ಇವಳ ಮಾತು ನಂಬಲೇಬೇಡಿ... ಇಲ್ನೋಡಿ, ಕಬ್ಬಿಣದ ಅಂಶವಿದ್ದಿದ್ದರೆ ಮ್ಯಾಗ್ನೆಟ್ಟಿಗೆ ಸೊಪ್ಪು ಅಂಟ್ಕೋಬೇಕಿತ್ತಲ್ವಾ!' ಎಂದರು. ಅಮ್ಮನ ಮುಖ ಪೆಚ್ಚಾಯ್ತು.

**ಎಸ್.ಎಂ. ಸ್ಮಿತಾ**





## ಸುಮ್ಮನೇ ವೇಸ್ಟ್

ನನ್ನ ಹತ್ತು ವರ್ಷದ ಮೊಮ್ಮಗಳು ಸ್ತುತಿಗೆ ಶಾಲೆಯಲ್ಲಿ ಟೀಚರು ಐದು ಪ್ರಶ್ನೆ ಕೊಟ್ಟು ಉತ್ತರ ಬರೆಯಲು ಹೇಳಿದ್ದರು. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯುವುದರಲ್ಲಿ ಕೊಟ್ಟ ಹಾಳೆಗಳು ತುಂಬಿ ಹೋದವು. ಇನ್ನೊಂದು ಉತ್ತರ ಬರೆಯಲು ಮತ್ತೊಂದು ಹಾಳೆಯನ್ನು ತೆಗೆದುಕೊಳ್ಳಬೇಕಾಯ್ತು. ಆ ಉತ್ತರ ಅವಳಿಗೆ ಗೊತ್ತಿದೆ ಎಂದು ಖಾತ್ರಿಯೂ ಇತ್ತು. ಗೊತ್ತಿರುವ ಆ ಒಂದು ಉತ್ತರ ಬರೆಯಲು ಸುಮ್ಮನೇ ಮತ್ತೊಂದು ಹಾಳೆಯನ್ನು ಹಾಳು ಮಾಡುವುದು ಬೇಡ ಎಂದು ಅದನ್ನು ಬರೆಯದೇ ಹಾಗೇ ಬಂದಿದ್ದಳು. ಅದಕ್ಕಾಗಿ ಅವಳಮ್ಮ ಒಂದೇ ಸಮನೆ ರೇಗುತ್ತಿದ್ದರೆ ನನಗಂತೂ ಅವಳ 'ಉಳಿತಾಯ ಯೋಜನೆ' ಕಂಡು ನಗು ಬಂತು.

**ಲಕ್ಷ್ಮೀ ವಿ. ಜೋಶಿ**